ದಿನಾಂಕ 19-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

(**ನ್ಯಾಯಾಲಯದ ಟಿಪ್ಪಣಿ** : ಸಾಕ್ಷಿದಾರನಿಗೆ ಕನ್ನಡ ಮಾತನಾಡಲು ಬರದೇ ಇರುವುದರಿಂದ ಮರಾಠಿಯಿಂದ ಕನ್ನಡಕ್ಕೆ ಸಾಕ್ಷ್ಯವನ್ನು ಅನುವಾದ ಮಾಡಲು ನ್ಯಾಯಾಲಯದಲ್ಲಿ ಉಪಸ್ಥಿತರಿರುವ ಶ್ರೀ ಎಮ್ ವಿ ಎ ವಕೀಲರಿಗೆ ಸಾಕ್ಷಿಯ ಸಾಕ್ಷ್ಯವನ್ನು ಕನ್ನಡಕ್ಕೆ ಅನುವಾದ ಮಾಡಲು ಕೋರಿದ್ದು, ಸದರಿ ವಕೀಲರು ಒಪ್ಪಿಕೊಂಡಿದ್ದು, ಸಾಕ್ಷಿದಾರನ ವಕೀಲರ ಸಮಕ್ಷಮ ಶ್ರೀ ಎಮ್ ವಿ ಎ ವಕೀಲರನ್ನು ಅನುವಾದಕಾರ ಎಂದು ನೇಮಿಸಿ ಪ್ರಮಾಣ ವಚನ ಬೋಧಿಸಿ ಸಾಕ್ಷಿಯ ಸಾಕ್ಷ್ಯವನ್ನು ಈ ಕೆಳಗಿನಂತೆ ದಾಖಲಿಸಿಕೊಳ್ಳಲಾಗಿದೆ. )

**ಪಾಟೀ ಸವಾಲು :** ಎದುರದಾರ ಪರ ಶ್ರೀಮತಿ ಆರ್ ಎಮ್ ಸಿ ವಕೀಲರಿಂದ.

ನನ್ನ ಮತ್ತು 2 ನೇ ಎದುರುದಾರನ ಮನೆಗಳು ಉತ್ತರಕ್ಕೆ ಮುಖ ಮಾಡಿ ಇವೆ ಎಂದರೆ ಸರಿ. ನನ್ನ ಮನೆಯ ಪಶ್ಚಿಮ ದಿಕ್ಕಿಗೆ ಎದುರುದಾರರ ಮನೆ ಇದೆ ಎಂದರೆ ಸರಿಯಲ್ಲ. 2016 ರಲ್ಲಿ ಚಾಂದಿ ಗೋಡೆಯ ಬಗ್ಗೆ ಎದುರುದಾರರು ಮೊದಲಗೇರಾ ಪಂಚಾಯತಿಗೆ ತಕರಾರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. 2016 ರಲ್ಲಿ ನಾನು ಮನೆ ಕಟ್ಟುವಾಗ ಎದುರುದಾರರು ಪಂಚಾಯತಿಗೆ ತಕರಾರು ಸಲ್ಲಿಸಿದ ನಂತರ ಪಂಚಾಯತಿ ಸಮೀತಿಯವರು ಸಭೆ ಮಾಡಿದ್ದು, ನಾನು ನಿರ್ಮಿಸಿದ ಚಾಂದಿ ಗೋಡೆಯ ಖರ್ಚನ್ನು ಅಂದರೆ ರೂ. 30 ಸಾವಿರ ಹಣ ಎದುರುದಾರರು ನನಗೆ ಕೊಡಬೇಕೆಂದು ತಿರ್ಮಾನಿಸಲಾಯಿತು ಹಾಗೂ ಸದರಿ ಸಭೆಯಲ್ಲಿ ಎದುರುದಾರರು ರೂ. 30 ಸಾವಿರ ಹಣ ಪೈಕಿ ರೂ.10 ಸಾವಿರ ಹಣ ನೀಡಿದರು ಎಂದರೆ ಸರಿಯಲ್ಲ.

2018 ರಲ್ಲಿ ಎದುರುದಾರರು ಮನೆ ನಿರ್ಮಾಣ ಮಾಡುವಾಗ ನಾನು ಪಂಚಾಯತಿಗೆ ತಕರಾರು ಮಾಡಿರುತ್ತೇನೆ ಎಂದರೆ ಸರಿ. ಆ ರೀತಿ ನಾನು ತಕರಾರು ಸಲ್ಲಿಸಿದ ನಂತರ ದಿನಾಂಕ 24-03-2018 ರಂದು ಪಂಚಾಯತಿಯ ಸಾಮಾಜಿಕ ನ್ಯಾಯ ಸಮಿತಿ ಸಭೆ ಕರೆಯಲಾಯಿತು ಎಂದರೆ ಸರಿಯಲ್ಲ. 2016 ರಲ್ಲಿ ಆದ ನಿರ್ಣಯದ ಪ್ರಕಾರ ನಾನು ನಿರ್ಮಿಸಿದ್ದ ಚಾಂದಿ ಗೋಡೆಗೆ ಎರಡು ಇಂಚು ಉದ್ದದ ಕಬ್ಬಿಣದ ಚಡಿ ಬಿಡಬೇಕೆಂದು ತೀರ್ಮಾನ ಆಗಿತ್ತು ಎಂದರೆ ಸರಿಯಲ್ಲ.

ನೀವು ಮಧ್ಯಂತರ ಅರ್ಜಿಯಲ್ಲಿ ಏನು ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ಎದುರುದಾರರು ಮನೆ ಕಟ್ಟುವಾಗ ತಾನು ಮೂರು ಬಾರಿ ಪಂಚಾಯತಿಗೆ ತಕರಾರು ಸಲ್ಲಿಸಿದರೂ ಸಹ ಅವರು ಯಾವುದೇ ರೀತಿಯ ಕ್ರಮ ಕೈಗೊಳ್ಳದೇ ಇರುವುದರಿಂದ ತಾನು ಈ ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಿರುತ್ತೇನೆ ಎನ್ನುತ್ತಾರೆ. ಈಗ ಸಾಕ್ಷಿಗೆ ಒಂದು ಭಾವಚಿತ್ರ ತೋರಿಸಿ ಸದರಿ

ಭಾವಚಿತ್ರದಲ್ಲಿ ಕಂಡು ಬರುವ ಕಟ್ಟಡವು ಇವತ್ತಿನ ದಿನವರೆಗೂ ಸಹ ಅದೇ ಸ್ಥಿತಿಯಲ್ಲಿ ಇದೆ ಎಂದು ಸೂಚಿಸಲಾಗಿ ಸಾಕ್ಷಿಯು ಸೂಚನೆಯನ್ನು ಅಲ್ಲಗಳೆಯುತ್ತಾರೆ.

ನ್ಯಾಯಾಲಯದ ಅವಗಾಹಣೆಗಾಗಿ ಸದರಿ ಭಾವಚಿತ್ರವನ್ನು ನಿಸಿ 1 ಎಂದು ಗುರುತಿಸಲಾಯಿತು.

ಅಸಲು ದಾವಾ ಸಂಖ್ಯೆ 70/2018 ಅನ್ನು ಸಲ್ಲಿಸುವಾಗ ಹಾಗೂ ಇವತ್ತಿನ ದಿನದವರೆಗೂ ನಿಸಿ 1 ರಲ್ಲಿ ಕಂಡು ಬರುವ ಕಟ್ಟಡವು ಯಾವ ಸ್ಥಿತಿಯಲ್ಲಿ ಇತ್ತೋ ಅದೇ ಸ್ಥಿತಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಎದುರುದಾರರು ನ್ಯಾಯಾಲಯದ ಯಾವುದೇ ಆದೇಶವನ್ನು ಉಲ್ಲಂಘನೆ ಮಾಡಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಜೊತೆ ವಯಕ್ತಿಕ ದ್ವೇಷ ಇಟ್ಟುಕೊಂಡು ಅವರು ಮನೆ ನಿರ್ಮಾಣ ಮಾಡಬಾರದೆಂಬ ಉದ್ದೇಶದಿಂದ ಈ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪಂಚಾಯತಿಯವರು ನನ್ನ ಪರ ತಿರ್ಮಾನ ಮಾಡಲಿಲ್ಲ ಎಂಬ ಕಾರಣದಿಂದ ಅವರ ವಿರುದ್ಧ ಹಾಗೂ ಊರ ಹಿರಿಯರ ವಿರುದ್ಧ ಖಾಸಗಿ ಪಿರ್ಯಾದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಎದುರುದಾರರಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸರಿ ಅದೆ

ದಿವಾಣಿ ನ್ಯಾಯಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.